**ಕರ್ನಾಟಕ ಸರ್ಕಾರ**

ಸಂಖ್ಯೆ: ಆರ್‌ಡಿ 57 ಎಲ್‌ಜಿಪಿ 2008

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:20.08.2009.

**ಸುತ್ತೋಲೆ**

ವಿಷಯ: ಗೋಮಾಳ ಜಮೀನಿನಲ್ಲಿ ಅನಧಿಕೃತ ಸಾಗುವಳಿ ಮಾಡುತ್ತಿರುವವರಿಗೆ ಸಾಗುವಳಿ ಚೀಟಿ ನೀಡುವ ಬಗ್ಗೆ.

ಉಲ್ಲೇಖ: 1) ಆರ್‌ಡಿ 74 ಎಲ್‌ಜಿಪಿ 2005, ದಿ:24.12.2005.
2) ಆರ್‌ಡಿ 83 ಎಲ್‌ಜಿಪಿ 2006, ದಿ:05.01.2007.
3) ಆರ್‌ಡಿ 57 ಎಲ್‌ಜಿಪಿ 2008, ದಿ:27.11.2008.

********

ಉಲ್ಲೇಖ (1)ರ ಸುತ್ತೋಲೆಯಲ್ಲಿ ರಾಜ್ಯ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 14048/05ಕ್ಕೆ ಸಂಬಂಧಿಸಿದಂತೆ ದಿ:22.09.2005ರಂದು ನೀಡಿದ ತೀರ್ಪಿನ ಅನ್ವಯ ಗೋಮಾಳ, ಗಾಯರಾಣ, ಹುಲ್ಲುಬನ್ನಿ ಜಮೀನಿಗಳಿಗೆ ಸಂಬಂಧಿಸಿದ ಯಾವುದೇ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸದಿರುವಂತೆ ಸೂಚಿಸಲಾಗಿತ್ತು. ನಂತರ ಉಲ್ಲೇಖ (2)ರ ಸುತ್ತೋಲೆಯಲ್ಲಿ ರಾಜ್ಯ ಉಚ್ಛ ನ್ಯಾಯಾಲಯವು ರಿಟ್ ಅಪೀಲ್ ಸಂಖ್ಯೆ:1353/06, ರಿಟ್ ಅರ್ಜಿ ಸಂಖ್ಯೆ:3813/05 ಮತ್ತು ರಿಟ್ ಅರ್ಜಿ ಸಂಖ್ಯೆ:21221/05ಗೆ ಸಂಬಂಧಿಸಿದಂತೆ ದಿ:18.11.2006ರಂದು ನೀಡಿದ ತೀರ್ಪಿನ ಅನ್ವಯ ಈ ಕೆಳಕಂಡ ಸೂಚನೆಗಳನ್ನು ನೀಡಲಾಗಿತ್ತು.

1) ಎಲ್ಲಾ ಜಿಲ್ಲಾಧಿಕಾರಿಗಳು ರಾಜ್ಯದಲ್ಲಿನ ಗೋಮಾಳ, ಗಾಯರಾಣ, ಹುಲ್ಲುಬನ್ನಿ ಜಮೀನನ್ನು ಗುರುತಿಸಿ ಆ ಜಮೀನುಗಳ ವಿಸ್ತೀರ್ಣವು ಕರ್ನಾಟಕ ಭೂ ಕಂದಾಯ ನಿಯಮಾವಳಿಗಳ ನಿಯಮ 97(1)ರಲ್ಲಿ ನಿರ್ದಿಷ್ಟ ಪಡಿಸಿರುವ ವಿಸ್ತೀರ್ಣಕ್ಕಿಂತ ಕಡಿಮೆ ಆಗಿದೆಯೇ ಎಂಬುದನ್ನು ಹಾಗೂ ಜಾನುವಾರುಗಳ ಸಂಖ್ಯೆಗಳ ಅನುಸಾರ ಆ ವಿಸ್ತೀರ್ಣವನ್ನು ಉಳಿಸಿಕೊಳ್ಳುವ ಅವಶ್ಯಕತೆ ಇದೆಯೇ ಎಂಬುದನ್ನು ಪರಿಶೀಲಿಸುವುದು.

2) ಗೋಮಾಳ, ಗಾಯರಾಣ, ಹುಲ್ಲುಬನ್ನಿ ಜಮೀನುಗಳ ವಿಸ್ತೀರ್ಣವು ಕರ್ನಾಟಕ ಭೂ ಕಂದಾಯ ನಿಯಮಾವಳಿಗಳ ನಿಯಮ 97(1)ಕ್ಕಿಂತ ಮೀರಿದ ಪ್ರಕರಣಗಳಲ್ಲಿ ಮಾತ್ರ ಆ ಜಮೀನಿನಲ್ಲಿ ಯಾರಾದರೂ ಅಕ್ರಮವಾಗಿ ಸಾಗುವಳಿ ಮಾಡಿಕೊಂಡು ಸ್ವಾಧೀನದಲ್ಲಿದ್ದು, ಅವರು ಸದರಿ ಜಮೀನನ್ನು ಪಡೆಯಲು ಅರ್ಹರಾಗಿದ್ದು, ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 94ಎ, 94ಬಿ ಮತ್ತು 94ಸಿ ರಡಿಯಲ್ಲಿ ನಿಗಧಿತ ಅವಧಿಯಲ್ಲಿ ಜಮೀನಿನ ಸಕ್ರಮೀಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದಲ್ಲಿ ಅವುಗಳನ್ನು ಸಕ್ರಮಗೊಳಿಸಲು ಸೂಕ್ತ ನಿರ್ಧಾರಕ್ಕಾಗಿ ಸರ್ಕಾರವು ರಚಿಸಿರುವ / ರಚಿಸುವ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯ ಮುಂದೆ ಇಡತಕ್ಕದ್ದು.

3) ಯಾವುದೇ ಪ್ರಕರಣದಲ್ಲಿ ಗೋಮಾಳ ಜಮೀನಿನ ವಿಸ್ತೀರ್ಣ ಕರ್ನಾಟಕ ಭೂ ಕಂದಾಯ ನಿಯಮಾವಳಿಗಳ ನಿಯಮ 97(1)ಕ್ಕಿಂತ ಕಡಿಮೆ ಇದ್ದಲ್ಲಿ ಅವುಗಳ ಒತ್ತುವರಿ ಆಗಿದ್ದರೂ ಸಹ ಸಕ್ರಮಗೊಳಿಸಲು ಯಾವುದೇ ಕ್ರಮವನ್ನಾಗಲಿ ಅಥವಾ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯ ಮುಂದೆ ಇಡುವ ಕ್ರಮವನ್ನಾಗಲಿ ತೆಗೆದುಕೊಳ್ಳಬಾರದು.

4) ಗೋಮಾಳ, ಗಾಯರಾಣ, ಹುಲ್ಲುಬನ್ನಿ ಜಮೀನುಗಳನ್ನು ಯಾವುದೇ ಖಾಸಗಿ ಸಂಸ್ಥೆಗಾಗಲಿ, ಖಾಸಗಿ ವ್ಯಕ್ತಿಗಾಗಲಿ ಅಥವಾ ಖಾಸಗಿ ಗಣಿಗಾರಿಕೆ ಉದ್ದೇಶಕ್ಕಾಗಲಿ ಮಂಜೂರು ಮಾಡಬಾರದು ಮತ್ತು ಇಂತಹ ಜಮೀನುಗಳು ಖಾಲಿ ಇದ್ದು ಸಕ್ರಮೀಕರಣಕ್ಕಾಗಿ ಯಾವುದೇ ಅರ್ಜಿ ಬಾಕಿ ಇಲ್ಲದಿದ್ದಲ್ಲಿ ಅಂತಹ ಜಮೀನುಗಳನ್ನು ಗ್ರಾಮೀಣ ಸಮುದಾಯದ ಸಾರ್ವಜನಿಕ ಉದ್ದೇಶಕ್ಕೆ ಮೀಸಲಿರಿಸತಕ್ಕದ್ದು.

ರಾಜ್ಯ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:15882/07ಕ್ಕೆ ಸಂಬಂಧಿಸಿದಂತೆ ದಿ:15.02.2008 ರಂದು ನೀಡಿದ ತೀರ್ಪಿನಲ್ಲಿ ಉಲ್ಲೇಖ (2)ರ ಸುತ್ತೋಲೆ ದಿ:05.01.2007ನ್ನು ರದ್ದುಪಡಿಸಿ, ಗೋಮಾಳ ಜಮೀನಿನಲ್ಲಿ ಕಲ್ಲುಗಣಿಗಾರಿಕೆಗೆ ಗುತ್ತಿಗೆ ನವೀಕರಿಸುವ ಹಾಗೂ ಮಂಜೂರಾತಿ ನೀಡಲು ಸಲ್ಲಿಸಲಾಗಿರುವ ಅರ್ಜಿಗಳನ್ನು ಪರಿಗಣಿಸಿ ಇತ್ಯರ್ಥ ಪಡಿಸಲು ನಿರ್ದೇಶನ ನೀಡಿರುತ್ತದೆ. ರಾಜ್ಯ ಉಚ್ಛ ನ್ಯಾಯಾಲಯದ ಸದರಿ ಆದೇಶದನ್ವಯ ಗೋಮಾಳ ಜಮೀನಿನಲ್ಲಿ ಗಣಿಗಾರಿಕೆಗೆ ಮಂಜೂರಾತಿ ನೀಡಿರುವ / ನವೀಕರಿಸುವ ಅರ್ಜಿಗಳ ಕುರಿತು ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 72 ಎಲ್‌ಜಿಪಿ 98, ದಿ:24.02.90ರಲ್ಲಿನ ಷರತ್ತುಗಳನ್ವಯ ಕ್ರಮ ಕೈಗೊಂಡು ಇತ್ಯರ್ಥ ಪಡಿಸಿ ಉಲ್ಲೇಖ (3)ರ ಸುತ್ತೋಲೆಯಲ್ಲಿ ಸೂಚಿಸಲಾಗಿತ್ತು.

ಈ ನಡುವೆ ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು ಇವರು ದಿ:17.01.2009ರ ಪತ್ರದಲ್ಲಿ ಅನಧಿಕೃತ ಸಾಗುವಳಿ ಸಕ್ರಮ ಸಮಿತಿಯಲ್ಲಿ ಮಂಜೂರಾದ ಪ್ರಕರಣಗಳಲ್ಲಿ ಗೋಮಾಳ ಜಮೀನುಗಳಿಗೆ ಸಂಬಂಧಿಸಿದಂತೆ ಸಾಗುವಳಿ ಚೀಟಿ ನೀಡುವ ಬಗ್ಗೆ ಹಾಗೂ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ಇವರು ದಿ:06.02.2009ರ ಪತ್ರದಲ್ಲಿ ದಿ:05.01.2007ರ ಸುತ್ತೋಲೆಯ ಬಗ್ಗೆ ಹಲವು ಸ್ಪಷ್ಟೀಕರಣಗಳನ್ನು ಕೋರಿರುತ್ತಾರೆ. ಸರ್ಕಾರವು ಈ ಬಗ್ಗೆ ಪರಿಶೀಲಿಸಿ, ಈ ಕೆಳಕಂಡ ಸೂಚನೆಗಳನ್ನು ನೀಡಿದೆ.

1) ಎಲ್ಲಾ ಜಿಲ್ಲಾಧಿಕಾರಿಗಳು ಅವರ ಜಿಲ್ಲೆಯಲ್ಲಿನ ಗೋಮಾಳ, ಗಾಯರಾಣ, ಹುಲ್ಲುಬನ್ನಿ ಜಮೀನನ್ನು ಗುರುತಿಸಿ ಆ ಜಮೀನುಗಳ ವಿಸ್ತೀರ್ಣವು ಕರ್ನಾಟಕ ಭೂ ಕಂದಾಯ ನಿಯಮಾವಳಿಗಳ ನಿಯಮ 97(1)ರಲ್ಲಿ ನಿರ್ದಿಷ್ಟ ಪಡಿಸಿರುವ ವಿಸ್ತೀರ್ಣಕ್ಕಿಂತ ಕಡಿಮೆ ಆಗಿದೆಯೇ ಎಂಬುದನ್ನು ಹಾಗೂ ಜಾನುವಾರುಗಳ ಸಂಖ್ಯೆಗಳ ಅನುಸಾರ ಆ ವಿಸ್ತೀರ್ಣವನ್ನು ಉಳಿಸಿಕೊಳ್ಳುವ ಅವಶ್ಯಕತೆ ಇದೆಯೇ ಎಂಬುದನ್ನು ಪರಿಶೀಲಿಸುವುದು.

2) ಗೋಮಾಳ, ಗಾಯರಾಣ, ಹುಲ್ಲುಬನ್ನಿ ಜಮೀನುಗಳ ವಿಸ್ತೀರ್ಣವು ಕರ್ನಾಟಕ ಭೂ ಕಂದಾಯ ನಿಯಮಾವಳಿಗಳ ನಿಯಮ 97(1)ಕ್ಕಿಂತ ಮೀರಿದ ಪ್ರಕರಣಗಳಲ್ಲಿ ಮಾತ್ರ ಆ ಜಮೀನಿನಲ್ಲಿ ಯಾರಾದರೂ ಅಕ್ರಮವಾಗಿ ಸಾಗುವಳಿ ಮಾಡಿಕೊಂಡು ಸ್ವಾಧೀನದಲ್ಲಿದ್ದು, ಅವರುಸದರಿ ಜಮೀನನ್ನು ಪಡೆಯಲು ಅರ್ಹರಾಗಿದ್ದು, ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 94ಎ ಮತ್ತು 94ಬಿ ರಡಿಯಲ್ಲಿ ನಿಗಧಿತ ಅವಧಿಯಲ್ಲಿ ಜಮೀನಿನ ಸಕ್ರಮೀಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದಲ್ಲಿ ಅವುಗಳನ್ನು ಸಕ್ರಮಗೊಳಿಸಲು ಸೂಕ್ತ ನಿರ್ಧಾರಕ್ಕಾಗಿ ಸರ್ಕಾರವು

ರಚಿಸಿರುವ / ರಚಿಸುವ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯ ಮುಂದೆ ಇಡತಕ್ಕದ್ದು. ಸದರಿ ಸಮಿತಿಯ ಮುಂದೆ ಸಕ್ರಮೀಕರಣಕ್ಕಾಗಿ ಇಡುವುದಕ್ಕೆ ಮೊದಲು ಅಂತಹ ಜಮೀನು ಅರ್ಜಿದಾರನ ಸ್ವಾಧೀನಾನುಭವದಲ್ಲಿದೆಯೇ ಅಥವಾ ಅಂತಹವನ್ನು ಬೇರೆಯವರಿಗೆ ಜಿ.ಪಿ.ಎ., ಕ್ರಯ ಕರಾರು ಮುಂತಾದವುಗಳನ್ನು ಮಾಡಿಕೊಟ್ಟು ಬೇರೆಯವರ ಸ್ವಾಧೀನದಲ್ಲಿದೆಯೇ ಎಂಬುದನ್ನು ಪರಿಶೀಲಿಸಿ ಜಮೀನು ಮೂಲ ಅರ್ಜಿದಾರನ ಸ್ವಾಧೀನದಲ್ಲಿಯೇ ಇರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ನೈಜ ಅರ್ಜಿದಾರನ ಪ್ರಕರಣಗಳಲ್ಲಿ ಸಮಿತಿಯು ಈಗಾಗಲೇ ಶಿಫಾರಸ್ಸು ಮಾಡಿದ್ದರೂ ಪೂರ್ವಭಾವಿಯಾಗಿ ಸದರಿ ಅಂಶವನ್ನು ಖಚಿತಪಡಿಸಿಕೊಂಡು ಸಾಗುವಳಿ ಚೀಟಿಯನ್ನು ನಿಯಮಾನುಸಾರ ಶುಲ್ಕ ಪಾವತಿಸಿಕೊಂಡು ನೀಡತಕ್ಕದ್ದು. ಒಂದುವೇಳೆ ಅಂತಹ ಜಮೀನು ನೈಜ ಅರ್ಜಿದಾರನನ್ನು ಹೊರತುಪಡಿಸಿ ಬೇರೆಯವರ ಸ್ವಾಧೀನಾನುಭವದಲ್ಲಿದ್ದುದೇ ಆದಲ್ಲಿ ಅಂತಹ ಅರ್ಜಿಗಳನ್ನು/ ಮಂಜೂರಾತಿಯನ್ನು ತಿರಸ್ಕರಿಸಲು ಕ್ರಮ ಕೈಗೊಳ್ಳತಕ್ಕದ್ದು.

3) ಯಾವುದೇ ಪ್ರಕರಣದಲ್ಲಿ ಗೋಮಾಳ ಜಮೀನಿನ ವಿಸ್ತೀರ್ಣ ಕರ್ನಾಟಕ ಭೂ ಕಂದಾಯ ನಿಯಮಾವಳಿಗಳ ನಿಯಮ 97(1)ಕ್ಕಿಂತ ಕಡಿಮೆ ಇದ್ದಲ್ಲಿ ಅವುಗಳ ಒತ್ತುವರಿ ಆಗಿದ್ದರೂ ಸಹ ಸಕ್ರಮಗೊಳಿಸಲು ಯಾವುದೇ ಕ್ರಮವನ್ನಾಗಲಿ ಅಥವಾ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯ ಮುಂದೆ ಇಡುವ ಕ್ರಮವನ್ನಾಗಲಿ ತೆಗೆದುಕೊಳ್ಳಬಾರದು. ಇಂತಹ ಪ್ರಕರಣಗಳಲ್ಲಿ ಸಮಿತಿಯು ಶಿಫಾರಸ್ಸು ಮಾಡಿದ್ದರೂ ಸಹ ಸಾಗುವಳಿ ಚೀಟಿ ನೀಡಲು ಅವಕಾಶವಿರುವುದಿಲ್ಲ. ಆದ್ದರಿಂದ ಅಂತಹ ಮಂಜೂರಾತಿಗಳನ್ನು ನಿಯಮಾನುಸಾರ ರದ್ದುಪಡಿಸಲು ಕ್ರಮ ವಹಿಸತಕ್ಕದ್ದು.

4) ಮಹಾ ನಗರ ಪಾಲಿಕೆ / ನಗರಸಭೆ ವ್ಯಾಪ್ತಿಯಲ್ಲಿನ ಗೋಮಾಳ ಜಮೀನುಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 97ಕ್ಕೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಆರ್‌ಡಿ 33 ಎಲ್‌ಜಿಪಿ 2007 ದಿನಾಂಕ:25.01.2008 ರಂದು ತಂದಿರುವ ತಿದ್ದುಪಡಿ ನಿಯಮ 97(5)ರನ್ವಯ ಕ್ರಮಕೈಗೊಳ್ಳತಕ್ಕದ್ದು.

20/5/09

(ಜಿ.ಎಸ್. ನಾರಾಯಣಸ್ವಾಮಿ)
ಸರ್ಕಾರದ ಕಾರ್ಯದರ್ಶಿ,
ಕಂದಾಯ ಇಲಾಖೆ.

ಇವರಿಗೆ,

1. ಪ್ರಾದೇಶಿಕ ಆಯುಕ್ತರು, ಬೆಂಗಳೂರು / ಬೆಳಗಾಂ / ಗುಲ್ಬರ್ಗಾ / ಮೈಸೂರು ವಿಭಾಗ.
2. ಎಲ್ಲಾ ಜಿಲ್ಲಾಧಿಕಾರಿಗಳು.
3. ಎಲ್ಲಾ ಉಪ ವಿಭಾಗಾಧಿಕಾರಿಗಳು. } ಜಿಲ್ಲಾಧಿಕಾರಿಗಳ ಮೂಲಕ.
4. ಎಲ್ಲಾ ತಹಶೀಲ್ದಾರರುಗಳು. }